# ಜನಪದವೂ... ನಾವೂ... ಪ್ರಸ್ತುತ ಸಂದರ್ಭವೂ...

**ಕುಮಾರ ಬಿ.**

ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ, ಡಾ. ಮನಮೋಹನ್‌ಸಿಂಗ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

**DOI: https://doi.org/10.5281/zenodo.18787573**

## ABSTRACT:

ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದ ಜೀವನ ಕ್ರಮವೇ ಜನಪದವಾಗಿದ್ದು, ಇದು ಕೇವಲ ಸಾಹಿತ್ಯವಲ್ಲದೆ ಬದುಕಿನ ಸಮಗ್ರ ದರ್ಶನವಾಗಿದೆ. ಅನಕ್ಷರಸ್ಥರಾಗಿದ್ದರೂ ಕೃಷಿ, ಕಲೆ ಮತ್ತು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಜನಪದರು, ಸತ್ಯ, ಸಹಬಾಳ್ವೆ ಮತ್ತು ಸಮಷ್ಟಿ ಪ್ರಜ್ಞೆಯ ಮೂಲಕ ಸುಸ್ಥಿರ ಸಮಾಜವನ್ನು ಕಟ್ಟಿದ್ದರು. ಆದರೆ ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಶಿಕ್ಷಣ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಈ ಮೂಲ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಸರಳವಾಗಿದ್ದ ನಿಸರ್ಗದ ಆರಾಧನೆಯು ಕಾಂಕ್ರೀಟ್ ಕಟ್ಟಡಗಳ ಆಡಂಬರ ಮತ್ತು ವೈದಿಕ ಆಚರಣೆಗಳಿಗೆ ಜಾಗ ಮಾಡಿಕೊಟ್ಟಿದೆ. ಸ್ವಾರ್ಥ, ತೋರಿಕೆ ಮತ್ತು ವಾಣಿಜ್ಯೀಕರಣಗೊಂಡ ಇಂದಿನ ಬದುಕಿನಲ್ಲಿ, ಜನಪದರ ನೈತಿಕ ನೆಲೆಗಟ್ಟುಗಳು ಮತ್ತು ಸಾಮೂಹಿಕ ಬದುಕಿನ ಮಹತ್ವವನ್ನು ಕಳೆದುಕೊಳ್ಳುತ್ತಿರುವ ವೈರುಧ್ಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## KEYWORDS:

ಜನಪದ ಸಂಸ್ಕೃತಿ, ಜೀವನ ಮೌಲ್ಯಗಳು, ಆಧುನಿಕತೆ, ಪ್ರಕೃತಿ ಆರಾಧನೆ, ಸಾಮೂಹಿಕ ಬದುಕು.

ಜನಪದವೆಂದರೆ ಜನರ ಪಥ, ಅಂದರೆ ಅವರ ಜೀವನ ಕ್ರಮವನ್ನು ರೂಪಿಸಿಕೊಂಡು ಬಂದ ದಾರಿ. ಜನರು ಬದುಕಿದ ರೀತಿ, ಅನುಸರಿಸಿದ ಜೀವನ, ಆಡಿದ ಆಟ, ಮಾಡಿದ ಊಟ, ಆಚರಿಸಿದ ಹಬ್ಬ-ಆಚರಣೆ, ಕೈಗೊಂಡ ಕೆಲಸ ಕಾರ್ಯಗಳು, ನಂಬಿದ ನಂಬಿಕೆ, ಹೇಳಿದ ತಿಳುವಳಿಕೆ, ರೂಢಿಸಿಕೊಂಡ ಕಲೆ; ಒಟ್ಟಾರೆಯಾಗಿ ಅಕ್ಷರಾಭ್ಯಾಸವಿಲ್ಲದ ಜನತೆ ಆದಿಕಾಲದಿಂದ ಇಂದಿನವರೆಗೂ ಅಜ್ಜಿ-ತಾತನಿಂದ ತಾಯಿ-ತಂದೆಗೆ, ತಾಯಿ-ತಂದೆಯಿಂದ ಮಕ್ಕಳಿಗೆ, ಮಕ್ಕಳಿಂದ ಮೊಮ್ಮಕ್ಕಳಿಗೆ ಹೀಗೆ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ರೂಢಿಗತ ಜೀವನ ಕ್ರಮವನ್ನು 'ಜನಪದ'ವೆಂದು ಕರೆಯಬಹುದು. ಇದನ್ನೇ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದುಬಂದ ಸಾಹಿತ್ಯವನ್ನೇ 'ಜನಪದ ಸಾಹಿತ್ಯ'ವೆಂದು ಕರೆಯಲಾಯಿತು. ಜನರ ಜೀವನಾನುಭವಗಳ ಹಾಗೂ ನೈತಿಕ ಮೌಲ್ಯಗಳ ಮೊತ್ತವೇ ಜನಪದ.

ಜನಪದರು ಅನಕ್ಷರಸ್ಥರು, ಆದರೆ ಅನೇಕ ಜ್ಞಾನವಿದ್ಯೆಗಳನ್ನು ರೂಢಿಗತವಾಗಿ ಕರಗತ ಮಾಡಿಕೊಂಡ ವಿದ್ಯಾವಂತರು. ಆಧುನಿಕ ಕಲಿಕೆಗೂ ಇವುಗಳೇ ತಳಪಾಯವೆಂದರೆ ತಪ್ಪಾಗಲಾರದು. ಇವರಿಗೆ ಕಾಲ ಕಾಲದ ಮಳೆಯನ್ನು ತಿಳಿದು, ಇಳೆಯ ಹಸನು ಮಾಡಿ, ಬೆಳೆಯ ಬೆಳೆದು, ಲೋಕದ ಹಸಿವು ನೀಗಿಸುವ, ಜನಸಮುದಾಯಗಳಿಗೆ ಆಹಾರ ಒದಗಿಸುವ ಕುಟುಂಬ ಪೋಷಣೆಯ ಕೃಷಿಯ ಪರಿಚಯ ಚೆನ್ನಾಗಿಯೇ ಇದೆ. ಅಂತೆಯೇ ಮರಗಿಡಗಳನ್ನು ನೆಟ್ಟು ನಿತ್ಯ ಹಸಿರು ಮಾಡಿ ಜೀವಸಂಕುಲಕ್ಕೆ ಉಸಿರು ನೀಡುವ ಕಲೆ ಸಹಜವಾಗಿಯೇ ಇದೆ. ಸುತ್ತಲಿನ ಪರಿಸರದಿಂದ, ಕಾಡುಗಳಿಂದ, ಮರಮುಟ್ಟುಗಳಿಂದ ತನಗೆ ಬೇಕಾದುದನ್ನು ಪಡೆದು, ವಾಸಯೋಗ್ಯ ಮನೆ ಮಾಡಿಕೊಂಡು, ಚಳಿಮಳೆಯಿಂದ ರಕ್ಷಣೆಯನ್ನು ಪಡೆದು, ನೀರು ಹರಿಯುವ ಜಾಗ ನೋಡಿ ಬೇಸಾಯ ಮಾಡಿ ನಾಗರಿಕತೆಗೆ ತಳಪಾಯ ಹಾಕಿದವರು ಜನಪದರು. ಇದೇ ಪರಿಸರದಿಂದ ಸಿಗುವ ವಸ್ತುಗಳನ್ನು ಬಳಸಿ ಅಲಂಕಾರಕ್ಕೆ ಹಾಗೂ ನಿತ್ಯೋಪಯೋಗಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಂಡಿದ್ದಾರೆ.

ಜೇನು ಕೃಷಿಯ ಕಲೆ, ಮಣ್ಣು ಕಲಸಿ, ರಾಟೆ ತಿರುವಿ ಮಡಿಕೆ ಮಾಡುವ ಕಲೆ, ನೀರಿಗಿಳಿದು ಮೀನಿನಂತೆ ಈಜಿ ಮೀನು ಹಿಡಿಯುವ ಕಲೆ, ಪ್ರಾಣಿಗಳ ನಡುವೆ ಜೀವಿಸಿ ಅವುಗಳನ್ನೇ ಅನುಸರಿಸಿ ಇನ್ನೊಂದು ಪ್ರಾಣಿಯನ್ನು ಬೇಟೆಯಾಡುವ ಕಲೆ, ಪ್ರಾಣಿಗಳನ್ನು ಪಳಗಿಸಿ ವ್ಯವಸಾಯಕ್ಕೆ, ಸಾರಿಗೆಗೆ ಬಳಸಿಕೊಳ್ಳುವ ಕಲೆ, ಬಿಲ್ವಿದ್ಯೆಯ ಕಲೆ, ಜೀವರಕ್ಷಣೆಗಾಗಿ ಅನೇಕ ಸಾಹಸ ಕಲೆಗಳನ್ನು ತನ್ನ ಪರಿಸರದಿಂದಲೇ ಕಲಿತಿದ್ದಾರೆ. ಬಿಡುವಿನ ವೇಳೆಯಲ್ಲಿ ತನ್ನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಮರಗಿಡ ಕಲ್ಲು ಮಣ್ಣುಗಳನ್ನೇ ದೈವವಾಗಿ ಮಾಡಿಕೊಂಡು ಪೂಜೆ ಮಾಡಿ ಹಬ್ಬ ಆಚರಣೆಗಳನ್ನು ಮಾಡಿಕೊಂಡಿದ್ದಾರೆ. ತಾನು ತಿಂದ ಗೆಡ್ಡೆ ಗೆಣಸುಗಳನ್ನು, ಬೇಟೆಯಾಡಿ ತಂದ ಮಾಂಸವನ್ನು ತಮ್ಮ ದೇವರಿಗೂ ನೈವೇದ್ಯವಾಗಿ ಅರ್ಪಿಸಿ ತಿನ್ನಿಸಿದ್ದಾರೆ, ತಾವೂ ತಿಂದಿದ್ದಾರೆ. ತನ್ನ ಆಹಾರವೇ ದೈವದ ಆಹಾರ, ತಾವಾಡುವ ಮಾತಿನ ಭಾಷೆಯನ್ನೇ

ತಮ್ಮ ದೇವರಿಗೂ ಉಣಬಡಿಸಿದ್ದಾರೆ. ಕಷ್ಟಸುಖ, ನೋವು ನಲಿವುಗಳನ್ನು ತಮ್ಮ ದೇವರೊಡನೆ ಹಂಚಿಕೊಂಡಿದ್ದಾರೆ. ತಮ್ಮ ಹರಕೆ-ಹಾರೈಕೆಗಳನ್ನು ಸಲ್ಲಿಸಿದ್ದಾರೆ. ತಮ್ಮ ಬೇಡಿಕೆಗಳು ಈಡೇರದಿದ್ದಾಗ ದೇವರಿಗೂ ಶಾಪ ಹಾಕಿ ಬೈದಿದ್ದಾರೆ. ಹರಕೆಗಳು ಫಲಿಸಿದಾಗ ಹಬ್ಬಗಳನ್ನು ಮಾಡಿ ಆಚರಿಸಿದ್ದಾರೆ. ತಾನು ಕಲಿತದ್ದನ್ನು ದೈವದ ಮುಂದೆ, ತನ್ನ ನೆರೆ-ಪರಿವಾರದ ಮುಂದೆ ಪ್ರದರ್ಶನ ಮಾಡಿ, ಮುಂದಿನ ತಲೆಮಾರಿಗೆ ಕಲಿಸಿ, ತಪ್ಪುಗಳನ್ನು ಒಪ್ಪ ಮಾಡಿ ತಿದ್ದಿದ್ದಾರೆ. ಆ ಮೂಲಕ ಜನಪದ ಕಲೆಗಳನ್ನು ಬೆಳೆಸಿಕೊಂಡು ಬಂದಿದ್ದಾರೆ.

ಕೌಟುಂಬಿಕ ಬದುಕಿನಲ್ಲಿ ಮಗುವಿನ ಲಾಲನೆ-ಪಾಲನೆಯ ಸಂದರ್ಭದಲ್ಲಿ ಲಾಲಿಹಾಡು, ಜೋಗುಳ ಹಾಡುಗಳನ್ನು ಹಾಡಿದ್ದಾರೆ. ಒಸಗೆಯ ಸಂದರ್ಭದಲ್ಲಿ ಒಸಗೆಯ ಹಾಡುಗಳು, ಮದುವೆಯ ಸಂದರ್ಭದಲ್ಲಿ ಸೋಬಾನ ಪದಗಳು, ಹುಟ್ಟು-ನಾಮಕರಣ ಸಂದರ್ಭದಲ್ಲಿ ಹಾರೈಕೆಯ ಹಾಡು, ತನ್ನವರನ್ನು ಕಳೆದುಕೊಂಡ ಸಾವಿನ ಸಂದರ್ಭದಲ್ಲಿ ಸ್ಮರಣೆಯ ಹಾಡುಗಳು, ಕೃಷಿಯ ಸಂದರ್ಭದಲ್ಲಿ ಕುಯ್ಯುವ, ಕಟ್ಟುವ, ಕೇರುವ ವಿವಿಧ ಕೆಲಸದ ಸಂದರ್ಭದಲ್ಲಿ ತನ್ನ ಜೀವನಾನುಭವಗಳನ್ನೇ ಪದ ಕಟ್ಟಿ ಹಾಡಿದ್ದಾರೆ. ಹೀಗೆ ಜನಪದ ಹಾಡುಗಳ ವೈವಿಧ್ಯತೆಯ ಪ್ರಕಾರಗಳನ್ನು (ಗರತಿಯ ಹಾಡುಗಳು, ಅರ್ಚಕ ರಂಗಸ್ವಾಮಿಯರ ಹಳ್ಳಿಯ ಹಾಡುಗಳು, ಗದ್ದಗಿಮಠರ ಜನಪದ ಗೀತೆಗಳ ಸಂಗ್ರಹ, ಸೋಬಾನ ಚಿಕ್ಕಮ್ಮನ ಪದಗಳು) ನೋಡಬಹುದು. ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಗೆಜ್ಜೆಕಟ್ಟಿ ಕುಣಿದಿದ್ದಾರೆ, ಸತ್ತ ಪ್ರಾಣಿಗಳ ಚರ್ಮವನ್ನು ಬಳಸಿ ಹಲಗೆ ತಮಟೆ ಮಾಡಿ ಬಡಿದಿದ್ದಾರೆ, ಡೊಳ್ಳು ಬಾರಿಸಿ ಕುಣಿದಿದ್ದಾರೆ, ತಬಲ ವಾದ್ಯಗಳನ್ನು ನುಡಿಸಿ ಮನಸ್ಸನ್ನು ಕುಣಿಸಿದ್ದಾರೆ. ಕಿನ್ನರಿ ನುಡಿಸಿ ಜನ ಮನ ಮಾಡಿ, ನುಡಿಸಿ ಜನಮನ ಗೆದ್ದು ಬೀಗಿದ್ದಾರೆ. ತಾವೂ ಕುಣಿದು, ತಮ್ಮವರನ್ನೂ ಕುಣಿಸಿ ನಲಿದು ಸಂಭ್ರಮಪಟ್ಟಿದ್ದಾರೆ. ತಾನು ಕಲಿತದ್ದನ್ನು ಯಾವುದೇ ಫಲಾಪೇಕ್ಷೆಯಿಲ್ಲದೇ ತನ್ನವರಿಗೂ, ತನ್ನ ನೆರೆಹೊರೆಯವರಿಗೂ ಕಲಿಸಿ ಜನಜೀವನದೊಂದಿಗೆ ಬದುಕಿದ್ದಾರೆ ಜನಪದರು.

ಈ ಕಲಿಕೆಯ ದಾರಿಯಲ್ಲಿ ತಾನು ಆಡಿದ ಮಾತಿಗೆ ಬದ್ಧವಾಗಿ ಸತ್ಯಶೀಲರಾಗಿ ಬದುಕಿದ್ದು ವಿಶೇಷ. ಎಷ್ಟೇ ಕಷ್ಟ ಕಾರ್ಪಣ್ಯಗಳು ಬಂದರೂ ಕುಗ್ಗದೆ ತಾನು ನೀಡಿದ ವಚನಕ್ಕೆ ಬದ್ಧವಾಗಿ ನಡೆದುಕೊಂಡ ರೀತಿ ಅನುಕರಣೀಯ. ನೆರೆಹೊರೆಗೆ ಹೊರೆಯಾಗದಂತೆ ಮಾನಾಪಮಾನಗಳಿಗೆ ಅಂಜಿ ಸ್ವಾಭಿಮಾನದಿಂದ ಬಾಳಿದರು. ಇರುವುದನ್ನು ಹಂಚಿಕೊಳ್ಳುತ್ತಾ ಸಹಬಾಳ್ವೆಯನ್ನು ಮಾಡಿದರು. ತನ್ನ ಮಕ್ಕಳ ಮೊಮ್ಮಕ್ಕಳ ತಲೆಮಾರಿಗೂ ತಾನು ತಿಳಿದದ್ದನ್ನು, ಕಲಿತದ್ದನ್ನು ಕಲಿಸಿ, ಯಾರಿಗೂ ಅನ್ಯಾಯ ಮಾಡದೇ, ಸ್ವತಃ ಲಾಭಕ್ಕಾಗಿ ಬದುಕದೆ, ಬಹುಜನರ ಹಿತಕ್ಕೆ, ಸರ್ವರ ಸುಖಕ್ಕಾಗಿ ಸರ್ವರೊಳಗೊಂದಾಗಿ ಬದುಕಿದರು. ಬಿತ್ತಿ-ಬೆಳೆದದ್ದನ್ನು ತನಗಾಗಿಯೇ ಮೀಸಲಾಗಿಡದೆ ಪ್ರಾಣಿ ಪಕ್ಷಿಯಾದಿ ಜೀವಸಂಕುಲಗಳಿಗೂ ಪಾಲು ನೀಡಿ, ದೇವರ ಮೀಸಲು ಎಂದು ಇತರ ಜೀವ ಜಂತುಗಳಿಗೆ ನೆರವಾದರು. ಬೆಳೆದು ತಂದದ್ದರಲ್ಲಿ ನೆರೆಯ ಜನರಿಗೂ ಕೊಟ್ಟು ಕೂಡಿ ಬಾಳುವುದನ್ನು ಕಲಿತುಕೊಂಡರು. ಛಲದಿಂದ

ಬದುಕಿ ಮಾತು ತಪ್ಪಿದಾಗ, ಮರ್ಯಾದೆ ಕಳೆದುಕೊಂಡಾಗ ಜೀವವನ್ನೇ ಬಿಟ್ಟಿದ್ದಾರೆ. ನಂಬಿದ ಜನರ, ಊರ ಹೆಣ್ಣಿನ ಪ್ರಾಣ ಹಾಗೂ ಮಾನ ರಕ್ಷಣೆಗಾಗಿ, ಊರ ಗೋವುಗಳ ರಕ್ಷಣೆಗಾಗಿ, ನಾಡಿನ ರಕ್ಷಣೆಗಾಗಿ ಹೋರಾಡಿ ಪ್ರಾಣತ್ಯಾಗ ಮಾಡಿ ಅಮರವೀರರಾಗಿ ಉಳಿದಿದ್ದಾರೆ. ಹೀಗೆ ಜೀವನ ಮೌಲ್ಯಗಳು, ವ್ಯಕ್ತಿ ನೆಲೆಯ ನೈತಿಕ ಮೌಲ್ಯಗಳು, ಸೌಹಾರ್ದ ಬೆಸೆಯುವ ಸಾಮಾಜಿಕ ಮೌಲ್ಯಗಳು ಪರಸ್ಪರ ಜೊತೆಯಾಗಿ ಕಲೆಯುವ ಸಾಂಸ್ಕೃತಿಕ ಮೌಲ್ಯಗಳು ಜನಪದರ ಜೀವನದೊಂದಿಗೆ ಹಾಸುಹೊಕ್ಕಾಗಿ ಬೆಳೆಯುತ್ತಾ, ಬೆಳೆಸುತ್ತಾ ಬಂದಿವೆ. ಇದನ್ನು ಜನಪದ ಸಂಸ್ಕೃತಿ ಎಂದು ಕರೆಯಲಾಗಿದೆ.

ಶಿಕ್ಷಣ ಪಡೆದ ಆಧುನಿಕ ಜನರು ಪ್ರಾಚೀನ ಪರಂಪರೆಯ ಸಾಮೂಹಿಕ ಬದುಕಿನ ಜೀವನ ಪದ್ಧತಿಯನ್ನು ನಾಶಗೊಳಿಸಿ ಸ್ವಾರ್ಥಿಗಳಾಗಿ ವಿಘಟಿತ ಕುಟುಂಬಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದಾರೆ. ವೈಚಾರಿಕ ತಿಳುವಳಿಕೆಯನ್ನು ಅರ್ಥ ಮಾಡಿಕೊಳ್ಳದೇ ಶ್ರೇಷ್ಠತೆಯ ವ್ಯಸನಕ್ಕೆ ಬಿದ್ದು ಮತ ಮೌಢ್ಯಗಳ ಮೊರೆ ಹೋಗಿದ್ದಾರೆ. ಪ್ರಾಚೀನ ಜನರಂತೆ ಜನ ಬದುಕಿನೊಂದಿಗೆ ಗುರುತಿಸಿಕೊಳ್ಳದೆ ಮೋಜು ಮಸ್ತಿ ಮಾಡುತ್ತಿದ್ದಾರೆ. ಹಣವೇ ಮುಖ್ಯವಾಗಿ ನೈತಿಕ ಮೌಲ್ಯಗಳನ್ನು ಕಡೆಗಣಿಸಿದ್ದಾರೆ. ಜನಪದ ಜೀವನ ಕಲೆಗಳ ಸ್ಥಾನದಲ್ಲಿ ತಮಟೆಯಂತಹ ಚರ್ಮವಾದ್ಯಗಳು ಮರೆಯಾಗಿ ಪ್ಲಾಸ್ಟಿಕ್ ಬ್ಯಾಂಡ್ ಬಜಾನಗಳು ಆವರಿಸಿವೆ. ಮನರಂಜನೆಗೆ ಸೀಮಿತವಾದ ಡಿ.ಜೆ.ಯಂತಹ ಪಾಶ್ಚಾತ್ಯ ಸಂಗೀತದ ಗುಂಗು, ಮದ್ಯಪಾನ, ಅರೆಬೆತ್ತಲೆ ನೃತ್ಯಗಳನ್ನು ಮಾಡುತ್ತಾ ಹಣವನ್ನು ಪೋಲುಮಾಡಿ ಹುಂಬತನವನ್ನು ತೋರುತ್ತಿದ್ದಾರೆ. ಇವರ ಹಬ್ಬ ಆಚರಣೆಗಳು ತೋರಿಕೆಯಿಂದ ಕೂಡಿವೆ.

ಪ್ರಕೃತಿಯ ನಡುವೆ ಮುಕ್ತವಾಗಿ ಬಿದ್ದಿದ್ದ, ಕಾಡುಗಳಲ್ಲಿ ವರ್ಷಕ್ಕೊಮ್ಮೆ ಪೂಜೆಗೆ ಒಳಗಾಗುತ್ತಿದ್ದ ಕಲ್ಲು ಮಣ್ಣಿನ ದೇವರುಗಳಿಗೆ ನಿಧಾನವಾಗಿ ದೇವರ ಗುಡಿಗಳು ತಲೆ ಎತ್ತಿದವು. ತದನಂತರ ಕಲ್ಲು ಮಣ್ಣು ಗುಡಿಗಳ ಬದಲಾಗಿ ಬೃಹತ್ ಕಾಂಕ್ರಿಟ್ ಕಟ್ಟಡಗಳ ದೇವಸ್ಥಾನಗಳು ನಿರ್ಮಾಣವಾದವು. ಅಲ್ಲಿನ ದೇವ-ದೇವತೆಗಳಿಗೂ ಮುಖವಾಡಗಳನ್ನು ಹೊದಿಸಲಾಯಿತು. ನಿರಾಡಂಬರವಾಗಿದ್ದ ಭಕ್ತಿಯು ಆಡಂಬರದ ದ್ಯೋತಕವಾಯಿತು. ಜನರ ಬದುಕಿಗೆ ಬೆಳಕಾಗಬೇಕಾಗಿದ್ದ ದೇವರನ್ನು ಜಗಮಗಿಸುವ ದೀಪಾಲಂಕಾರಗಳ ಬೆಳಕಿನ ಪ್ರಭೆಗೆ ಕಣ್ಣುಬಿಡಲಾರದಂತೆ ಕುರುಡಾಗಿಸಿದೆ. ಪುರೋಹಿತರ ಮಂತ್ರಗಳಿಂದ ಕಿವಿಯನ್ನು ಕಿವುಡಾಗಿಸಿ, ಕಾಂಕ್ರಿಟ್ ಕಟ್ಟಡಗಳಿಂದ ಹೊರ ಬರಲಾರದಂತೆ ಮಂತ್ರಗಳಿಂದ ಬಂಧಿಸಲಾಗಿದೆ. ಬ್ರಾಹ್ಮಣ ಶ್ರೇಷ್ಠತೆಯನ್ನು, ಅವರ ಮಂತ್ರಗಳನ್ನು ಒಪ್ಪಿಕೊಳ್ಳದ ಜನಪದರು, ಬ್ರಾಹ್ಮಣ ಶ್ರೇಷ್ಠತೆಯನ್ನು ಒಪ್ಪಿಕೊಂಡು ಪರಿಸರ ವಿರೋಧಿಯಾದ ಯಜ್ಞ, ಯಾಗಗಳ ಮಾಡುತ್ತಿರುವ ಜನಪದ ಪರಂಪರೆಯ ಕುಡಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಬದಲಾದ ಸಂದರ್ಭದಲ್ಲಿ ಹಬ್ಬ ಆಚರಣೆಗಳು ಹಿಂದಿನಂತೆ ಮಾನವತೆಯ ಪ್ರತೀಕಗಳಾಗದೆ, ವೈಭವದ ತೋರಿಕೆಯ ಪ್ರತಿರೂಪವಾಗಿರುವುದು ದುರಂತ.

**ಪರಾಮರ್ಶನ ಗ್ರಂಥಗಳು:**


1. ಕಾಳೇಗೌಡ ನಾಗವಾರ, (1999), ಜಾನಪದ ಸಾಹಿತ್ಯ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
2. ತಪಸ್ವಿಕುಮಾರ ನಂ., (1982), ಜನಪದ ಸಂಸ್ಕೃತಿ, ಮೈಸೂರು: ಕರ್ನಾಟಕ ಜಾನಪದ ಪರಿಷತ್.
3. ಶಂಕರ ನಾರಾಯಣ ತೀ.ನಂ., (2001), ಜಾನಪದ ಕೈಪಿಡಿ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ನಾಯಕ ಹಾ.ಮಾ., (2015), ಜಾನಪದ ಸ್ವರೂಪ, ಶಿವಮೊಗ್ಗ: ಗೀತಾಂಜಲಿ ಪುಸ್ತಕ ಪ್ರಕಾಶನ.
5. ಪರಮಶಿವಯ್ಯ ಜೀ.ಶಂ., (2015), ಜನಪದ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
6. ಆನಂದ ಬಾರಿಕರ, (ದಿನಾಂಕವಿಲ್ಲ), ಜನಪದ ಸಾಹಿತ್ಯ ಮತ್ತು ಆಧುನಿಕತೆ: ಒಂದು ಅವಲೋಕನ, ಧಾರವಾಡ: ಕರ್ನಾಟಕ ಮಹಾವಿದ್ಯಾಲಯ.
7. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಶಾಲಿನಿ ರಘುನಾಥ (ಸಂ), (2010), ಜನಪದ ಕಲೆ: ಅವಲೋಕನ, ಬೆಂಗಳೂರು: ಕರ್ನಾಟಕ ಜನಪದ ಅಕಾಡೆಮಿ.